

ಹೆಂಬೇರಾಳು ಶಾಂತಯ್ಯ (ಏಪ್ರಿಲ್ 7, 1924 – ಏಪ್ರಿಲ್ 13, 2008) ಕನ್ನಡ ಸಾಹಿತ್ಯದಲ್ಲಿ ಶಾಂತರಸರೆಂದೇ ಪ್ರಸಿದ್ಧರು. ಕಥೆ, ಕವಿತೆ, ಕಾದಂಬರಿ, ಅನುವಾದಗಳಲ್ಲಿ ತೊಡಗಿಕೊಂಡಿದ್ದರೂ, ಕವಿಯಾಗಿ– ಗಜಲ್ ರಚನೆಕಾರರಾಗಿ– ಪ್ರಸಿದ್ಧರು. ಗಜಲ್‌ಗಳಿಗೆ ಘನತೆ ಹಾಗೂ ಶಿಸ್ತಿನ ಚೌಕಟ್ಟು ದೊರಕಿಸಿಕೊಟ್ಟ ಕೀರ್ತಿ ಅವರದು. ತಂದೆ ಚೆನ್ನಬಸವಯ್ಯ ಹಾಗೂ ತಾಯಿ ಸಿದ್ಧಲಿಂಗಮ್ಮ. ಸಿರಿವಾರ, ಮುಷ್ಟೂರು, ಕಲಬುರಗಿ, ರಾಯಚೂರು, ಲಾತೂರುಗಳಲ್ಲಿ ವಿದ್ಯಾಭ್ಯಾಸ. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು, ರಜಾಕಾರರ ವಿರುದ್ಧದ ಚಳವಳಿಯಲ್ಲಿ ಸಕ್ರಿಯರಾಗಿದ್ದರು. ಬೀದರ್‌ನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಶಾಂತರಸರಿಗೆ ಸಂದಿವೆ. 'ಕನ್ನಡ ಗಜಲ್', 'ಬಯಲು ಸೀಮೆಯ ಬಯಲು', 'ಸತ್ಯಸ್ನೇಹಿ, 'ನಂಜು ನೊರೆವಾಲು', 'ಬಸವಪೂರ್ವ ಯುಗದ ಶರಣರು', 'ಪುರಾತನರ ಪುರಾಣ', 'ಮುಸುಕು ತೆರೆ', 'ಬೆನ್ನ ಹಿಂದಿನ ಬೆಳಕು', 'ಉಳಿವ ಮರ', 'ಉರಿದ ಬದುಕು' ಹಾಗೂ 'ಬಾರಮಾಸ' ಶಾಂತರಸರ ಪ್ರಮುಖ ಕೃತಿಗಳು.

ಬಹುಮಾನ್ಯತೆ ಪಡೆದ ರಾಜಾಧಿರಾಜರಿಗೆ ಗುರುವಾಗಿದ್ದ ಪರಂಪರೆಯಾಗಿತ್ತು. ಲಕುಲೀಶ ಅಥವಾ ಕಾಳಮುಖ ಪರಂಪರೆಗೆ ಸೇರಿದ್ದ ಈ ಪರಂಪರೆಯ ಯತಿಗಳು ನಾಡಿನ ತುಂಬಾ ಅನೇಕ ರಾಜಮಹಾರಾಜರಿಗೆ ರಾಜಗುರುಗಳಾಗಿದ್ದರು. ಕ್ರಿಯಾಶಕ್ತಿ ಪರಂಪರೆಯ ಒಬ್ಬರು ರಾಷ್ಟ್ರಕೂಟರ ಗುರುಗಳೂ ಆಗಿದ್ದರು. ಒಂದನೇ ಕೃಷ್ಣ ಎಲ್ಲೋರ ಹಾಗೂ ಅಜಂತಾದ ಗುಹಾಂತರ ದೇಗುಲಗಳನ್ನು ಶಂಕರಲಿಂಗಕ್ರಿಯಾಶಕ್ತಿ ದೇವರೆಂಬ ಶೈವಗುರುವಿನಿಂದ ಉದ್ಘಾಟನೆ ಮಾಡಿಸುತ್ತಾನೆ.

ಶಾಂತರಸರಿಗೆ ಹೈದ್ರಾಬಾದ್ ಕರ್ನಾಟಕವೆಂದರೆ (ಕಲ್ಯಾಣ ಕರ್ನಾಟಕ) ಪ್ರಾಣ. ಅವರು ಹೈದ್ರಾಬಾದ್ ಕರ್ನಾಟಕವನ್ನು ಜ್ಞಾನದಿಂದ ಹಿಂದುಳಿದ ಪ್ರದೇಶವೆಂದು ಯಾರಾದರೂ ಹೇಳಿದರೆ, ದೂರ್ವಾಸ ಮುನಿಯಾಗುತ್ತಿದ್ದರು. ಈ ಹಿಂದುಳಿದ ಟ್ಯಾಗ್‌ನಿಂದಲೇ ನಮ್ಮನ್ನು ದಕ್ಷಿಣದವರು ತುಳಿಯಲು ಪ್ರಯತ್ನಿಸುತ್ತಾರೆ ಎಂದು ಅವರು ಯಾವಾಗಲೂ ಅನ್ನುತ್ತಿದ್ದರು. ಅದಕ್ಕಾಗಿ ಹೈದ್ರಾಬಾದ್ ಕರ್ನಾಟಕದ ಪ್ರಾತಿನಿಧಿಕ ಕಾವ್ಯ 'ಬೆನ್ನ ಹಿಂದಿನ ಬೆಳಕು' ಎಂಬ ಕವನ ಸಂಕಲನ ತಂದರು. ಅದಕ್ಕೆ ಪ್ರಮುಖ ಕಾರಣ ಲಂಕೇಶರ 'ಅಕ್ಷರ ಹೊಸಕಾವ್ಯ'. ಲಂಕೇಶ್ ಸಂಪಾದಿಸಿದ ಸಂಕಲನ ನಾಡಿನ ಪ್ರಾತಿನಿಧಿಕ ಕೃತಿ ಎಂಬ ಘೋಷದಡಿ ಬಿಡುಗಡೆಯಾಗಿತ್ತು. ಈ ಸಂಕಲನದಲ್ಲಿ ಹೈದ್ರಾಬಾದ್ ಕರ್ನಾಟಕದ ಒಬ್ಬನೇ ಒಬ್ಬ ಕವಿ ಇಲ್ಲದಿದ್ದುದು ಶಾಂತರಸರಿಗೆ ಸಿಟ್ಟು ತರಿಸಿತ್ತು. ಅಲ್ಲಿಂದ ಲಂಕೇಶರ ಮತ್ತು ಶಾಂತರಸರ ಜಗಳ ಆರಂಭವಾಯಿತು. ಶಾಂತರಸರನ್ನು 'ಇದು ಶಾಂತರಸವಲ್ಲ, ಭೀಭತ್ಸರಸ' ಎಂದು ಲಂಕೇಶ್ ಜಂಕಿಸುತ್ತಿದ್ದರು. ಶಾಂತರಸರಿಗೆ ಇಲ್ಲಿಯ ಜನ ಮುಖ್ಯವಾಹಿನಿಗೆ ಬರಬೇಕು ಎಂಬ ಹಂಬಲವಿತ್ತು. ಅಂತೆಯೇ ಸಾಕಷ್ಟು ಜನ ಶಿಷ್ಯರನ್ನು ತಯಾರು ಮಾಡಿದರು. ಅವರು ನಾಡಿನಾದ್ಯಂತ, ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಲು ಕಾರಣರಾದರು. ಅವರು ಬಿತ್ತಿದ ಆ ಬೀಜ ಇಂದು ಹೆಮ್ಮರವಾಗಿ ಫಲ